**ಡಾ. ಕೋಲ್‌ಮನ್ ಸಭಾಂಗಣ, ಕೃಷಿ ಆಯುಕ್ತರ ಕಚೇರಿ, ಶೇಷಾದ್ರಿ ರಸ್ತೆ, ಬೆಂಗಳೂರಿನಲ್ಲಿ ದಿನಾಂಕ 12–5–2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಐದನೇಯ ಸಭೆಯ ನಡುವಳಿಗಳು**

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1 | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2 | ಶ್ರೀ ಎಂ.ವಿ. ಗುತ್ತೆದಾರ | ಸದಸ್ಯರು |
| 3 | ಶ್ರೀ ಎಂ.ಎಸ್. ಸೋಮಲಿಂಗಪ್ಪ | ಸದಸ್ಯರು |
| 4 | ಶ್ರೀ ಭೋಜನಗೌಡ | ಸದಸ್ಯರು |
| 5 | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 6 | ಶ್ರೀ ವೆಂಕನಗೌಡ ಮಲ್ಲಾಪುರ | ಸದಸ್ಯರು |
| 7 | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 8 | ಶ್ರೀ ಹನುಮೇಶ ನಾಯಕ | ಸದಸ್ಯರು |
| 9 | ಡಾ. ಚಲ್ಲಯ್ಯ | ಸದಸ್ಯರು |
| 10 | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 11 | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 12 | ಡಾ. ಎಸ್.ಜಿ. ಪಾಟೀಲ | ಸದಸ್ಯರು |
| 13 | ಡಾ. ಪಿ. ಬಾಲಕೃಷ್ಣನ್ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಐದನೇ ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯಸೂಚಿಯ ಕಲಮುವಾರು ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 26–3–2011 ಮತ್ತು 15–4–2011 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ತೃತೀಯ ಹಾಗೂ ನಾಲ್ಕನೇಯ ಸಭೆಯ ನಡುವಳಿಗಳನ್ನು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಸ್ಥಿರೀಕರಿಸುವುದು** |

ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ವೆಂಕನಗೌಡ ಮಲ್ಲಾಪುರರವರು ಮೂರನೇ ಮತ್ತು ನಾಲ್ಕನೇ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆಯಾದ ಕೆಲವು ವಿಷಯಗಳನ್ನು ಮತ್ತು ತಮ್ಮ ಹೆಸರನ್ನು ನಡವಳಿಯಲ್ಲಿ ಪ್ರಸ್ತಾಪಿಸಿರುವುದಿಲ್ಲವೆಂದು ತಿಳಿಸಿದರು ಅದಕ್ಕೆ ಡಾ. ಪಿ. ಬಾಲಕೃಷ್ಣನ್, ಕುಲಸಚಿವರು ಅಂತಹ ಅಂಶಗಳನ್ನು ಸೂಚಿಸಿದರೆ ನಡವಳಿಯಲ್ಲಿ ಸೇರಿಸಲಾಗುತ್ತದೆ ಎಂದು ಉತ್ತರಿಸಿದರು. ಸಾಮಾನ್ಯವಾಗಿ ಸಭೆಯಲ್ಲಿ ಚರ್ಚೆಯಾದ ಹಾಗೂ ಸಲಹೆ ನೀಡಿದ ವಿಷಯಗಳನ್ನು ಮಾತ್ರ ಸಭೆಯ ನಡುವಳಿಯಲ್ಲಿ ಪ್ರಸ್ತಾಪಿಸಬೇಕೆಂದು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ ಮತ್ತು ಡಾ. ಚಲ್ಲಯ್ಯರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದರಂತೆ ಅನೇಕ ಇನ್ನುಳಿದ ಸದಸ್ಯರು ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ವೆಂಕನಗೌಡ ಮಲ್ಲಾಪುರ ಮತ್ತು ಶ್ರೀ ಹನುಮೇಶ ನಾಯಕ ಅವರು ಸಭೆಯ ನಡವಳಿಯಲ್ಲಿ ಹೆಸರುಗಳನ್ನೂ ಸೇರಿಸಬೇಕೆಂದು ಒತ್ತಾಯಿಸಿದರು. ಅಲ್ಲದೆ ಮುಂದುವರೆದು ತಮ್ಮನ್ನು ಸದಸ್ಯತ್ವದಿಂದ ತೆಗೆಯಲು ಸರ್ಕಾರಕ್ಕೆ ಶಿಫಾರಸು ಬಗ್ಗೆ ಮಾನ್ಯ ಸದಸ್ಯರುಗಳಾದ ಶ್ರೀ ಹನುಮೇಶ ನಾಯಕ ಮತ್ತು ಶ್ರೀ ಶಿವಪ್ಪ ಬಿ. ಬಲ್ಲಿದವ ಅಧ್ಯಕ್ಷರಲ್ಲಿ ಮಾಹಿತಿ ಕೇಳಿದರು. ಅದಕ್ಕೆ ಅಧ್ಯಕ್ಷರು ಅಂತಹ ಯಾವುದೇ ಕೆಲಸವು ನಡೆದಿಲ್ಲವೆಂದು ಮತ್ತು ಅದು ತಮ್ಮ ಅಧಿಕಾರ ವ್ಯಾಪ್ತಿಗೆ ಮೀರಿದ್ದೆಂದು ಉತ್ತರಿಸಿದರು. ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ ರವರು ಮಧ್ಯ ಪ್ರವೇಶಿಸಿ ಅಂತಹ ಪತ್ರಗಳೇನಾದರೂ ಇದ್ದರೆ ವ್ಯವಸ್ಥಾಪನಾ ಮಂಡಳಿಯ ಮುಂದೆ ಮುಂದಿನ ಸಭೆಯಲ್ಲಿ ತನ್ನಿ, ಹಾಗೆಯೇ ಇಂತಹ ವಿಷಯಗಳನ್ನು ಸಭೆಯಲ್ಲಿ ಚರ್ಚೆಯಾಗದಂತೆ ಮುಂದಿನ ದಿನಗಳಲ್ಲಿ ನೋಡಿಕೊಳ್ಳಿ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿ ಅವರು ಬೆಂಬಲ ವ್ಯಕ್ತಪಡಿಸಿದರು.

ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರಿನ ಡೈರಿ ಷೆಡ್‌ಗೆ ಇತ್ತೀಚೆಗೆ ಭೇಟಿ ನೀಡಿದಾಗ ಕಳಪೆ ಗುಣಮಟ್ಟದ ಸಿಮೇಂಟ್ ಮಿಶ್ರಣ ಬಳಸಿ ಕೊಟ್ಟಿಗೆ ಗೊಬ್ಬರದ ತೊಟ್ಟಿ ನಿರ್ಮಿಸುತ್ತಿರುವುದು ಕಂಡುಬಂದಿದೆ ಎಂದು ಮಾನ್ಯ ಸದಸ್ಯರಾದ ಶ್ರೀ ಶಿವಪ್ಪ ಬಿ. ಬಲ್ಲಿದವ ರವರು ವ್ಯವಸ್ಥಾಪನಾ ಮಂಡಳಿಗೆ ತಿಳಿಸಿದರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಬೆಂಬಲ ವ್ಯಕ್ತಪಡಿಸಿದರು. ಹಾಗೆಯೇ ಕೃಷಿ ಸಂಶೋಧನಾ ಕೇಂದ್ರ, ರದ್ದೇವಾಡಿಗಿಯಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡದ ಸೋರುವಿಕೆಯ ಬಗ್ಗೆ ಪ್ರಸ್ತಾಪಿಸಿದರು. ಈ ಪೂರಕ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟೀಲ್ ಅವರು ಸಲಹೆ ನೀಡಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಮೇಲೆ ತಿಳಿಸಿದಂತಹ ಕಟ್ಟಡದ ಕಾಮಗಾರಿಯು ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಕಾಲಾವಧಿಯಲ್ಲಿ ನಿರ್ಮಿಸಲ್ಪಟ್ಟಿದೆ ಎಂದು ತಿಳಿಸಿದರು.

ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯ ಡೈರಿ ಶೆಡ್‌ನ ಕಾರ್ಯವೈಖರಿಯ ಬಗ್ಗೆ ದೂರು ನೀಡಿ ಹಲವು ತಿಂಗಳು ಕಳೆದರೂ ಡೈರಿಯು ಸುಧಾರಣೆಯಾಗಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡರವರು ಸಭೆಗೆ ತಿಳಿಸಿದರು. ಅದಕ್ಕೆ ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯರವರು ಬೆಂಬಲ ವ್ಯಕ್ತಪಡಿಸಿದರು. ಅಧ್ಯಕ್ಷರು ಈ ವಿಷಯದಲ್ಲಿ ಒಂದು ಸಮಿತಿಯನ್ನು ರಚಿಸಿ ಅದರ ವರದಿಯಂತೆ ಸುಧಾರಣೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಡೈರಿ ಶೆಡ್‌ನ ಕಾರ್ಯವೈಖರಿಯಲ್ಲಿ ಬಹಳಷ್ಟು ಸುಧಾರಣೆ ಕಂಡುಬಂದಿದ್ದು ಮಾನ್ಯ ಸದಸ್ಯರು ಇದನ್ನು ಖುದ್ದಾಗಿ ನೋಡಿ ಖಚಿತಪಡಿಸಿಕೊಳ್ಳಬಹುದುದೆಂದು ಉತ್ತರಿಸಿದರು.

ಸಿಬ್ಬಂದಿಯವರ ವರ್ಗಾವಣೆಯ ಕುರಿತು ಚರ್ಚಿಸುತ್ತಾ ವರ್ಗಾವಣೆಯ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲವೆಂದು ಮಾನ್ಯ ಸದಸ್ಯರಾದ ಶ್ರಿ ಹನುಮೇಶ್ ನಾಯಕ ಮತ್ತು ಶ್ರೀ ಶಿವಪ್ಪ ಬಲ್ಲಿದವರವರು ತಿಳಿಸಿದರು. ಅದಕ್ಕೆ ಸದಸ್ಯರುಗಳು ವಿಶ್ವವಿದ್ಯಾಲಯದ ದಿನನಿತ್ಯದ ಆಡಳಿತದಲ್ಲಿ ಮಧ್ಯಸ್ಥಿಕೆಯಾಗುವುದಕ್ಕೆ ನಿಯಮಿತ ಅಧಿಕಾರವಿರುತ್ತದೆ ಎಂದು ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ, ಶ್ರೀ ಶಂಕರಗೌಡ ಹರವಿ, ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ, ಮತ್ತು ಶ್ರೀ ಜಿ. ತಿಮ್ಮನಗೌಡ ಪಾಟೀಲರವರು ತಿಳಿಸಿದರು. ಇದಕ್ಕೆ ವರ್ಗಾವಣೆಗಳು ಕೋರಿಕೆಯ ಮೇರೆಗೆ, ಅನುಚಿತ ನಡವಳಿಕೆಯ ಮೇರೆಗೆ, ಅಶಿಸ್ತು, ವಿಶ್ವವಿದ್ಯಾಲಯದ ಹಣದ ದುರ್ಬಳಕೆ ಮತ್ತು ಸ್ಥಾನಿಕ ದೂರಿನಮೇರೆಗೆ ಹಾಗೂ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ನಡೆದಿರುವುದಾಗಿ ಅಧ್ಯಕ್ಷರು ತಿಳಿಸಿದರು.

ಶ್ರೀ ವೆಂಕಟರಾಮ, ಭಾರಿ ವಾಹನ ಚಾಲಕ, ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿ ರವರ ವರ್ಗಾವಣೆಯ ವಿಷಯವನ್ನು ಮಾನ್ಯ ಸದಸ್ಯರಾದ ಶ್ರೀ ಹನುಮೇಶ್ ನಾಯಕ ಅವರು ಪ್ರಸ್ತಾಪಿಸಿದರು. ಶ್ರೀ ವೆಂಕಟರಾಮನ್‌ರವರ ಕುರಿತು ವಿಶ್ವವಿದ್ಯಾಲಯವು ತುಂಬಾ ದೂರುಗಳನ್ನು ಬಹಳ ಹಿಂದಿನಿಂದಲೂ ಸ್ವೀಕರಿಸಿದ್ದು, ಆದ್ದರಿಂದ ಸದರಿ ನೌಕರನನ್ನು ವರ್ಗಾವಣೆಗೊಳಿಸಿರುವುದಾಗಿ ಅಧ್ಯಕ್ಷರು ತಿಳಿಸಿದರು. ಹಾಗೆಯೇ ಶ್ರೀ ನಾಗರಾಜ, ಪ್ರಯೋಗ ಶಾಲಾ ಸಹಾಯಕ ಇವರನ್ನು ಸಮಿತಿಯ ವರದಿಯನ್ವಯ ವರ್ಗಾವಣೆಗೊಳಿಸಿರುವುದಾಗಿ ತಿಳಿಸಿದರು. ಯಾವ ನೌಕರಿನಿಂದ ತೊಂದರೆಯಾಗುತ್ತಿದ್ದರೆ ಮತ್ತು ಆತನ ಕಾರ್ಯವೈಖರಿಯು ಸರಿಯಾಗಿಲ್ಲದಿದ್ದರೆ ಅಂತಹ ನೌಕರರನ್ನು ಬದಲಾಯಿಸಿ ಫಾರಂನ ಕ್ಷಮತೆಯನ್ನು ಹೆಚ್ಚಿಸಲು ಒಳ್ಳೆಯ ನೌಕರರನ್ನು ಒದಗಿಸಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಭೋಜನಗೌಡ ಅವರು ಸಲಹೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಎಂ.ಎಸ್. ಸೋಮಲಿಂಗಪ್ಪ, ಶ್ರೀ ವೆಂಕನಗೌಡ ಮಲ್ಕಾಪುರ, ಶ್ರೀ ಭೋಜನಗೌಡ ಶ್ರೀ ಹನುಮೇಶ ನಾಯಕ ಮತ್ತು ಮುಂತಾದವರಿಂದ ವರ್ಗಾವಣೆಯ ನಿಯಮದ ಬಗ್ಗೆ ಸುದೀರ್ಘ ಚರ್ಚೆನಡೆಸಲಾಯಿತು. ಯಾವ ನೌಕರರು ಐದು ವರ್ಷಗಳ ಸೇವೆಯನ್ನು ಒಂದೇ ಕೇಂದ್ರದಲ್ಲಿ ಮಾಡಿದ್ದರೆ ಅಂತಹ ನೌಕರರನ್ನು ವರ್ಗಾವಣೆ ಮಾಡಬಹುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಆದರೂ ಈ ನಿಯಮ ಎಲ್ಲಾ ನೌಕರರಿಗೆ ಅನ್ವಯಿಸುವುದಿಲ್ಲ, ಯಾಕೆಂದರೆ ಕೆಲವು ವಿಜ್ಞಾನಿಗಳು / ನೌಕರರು

ಸಂಶೋಧನೆಯಲ್ಲಿ, ವಿಶೇಷ ಕಾರ್ಯದಲ್ಲಿ ತಮ್ಮ ಕೇಂದ್ರಗಳಲ್ಲಿ ತೊಡಗಿಕೊಂಡಿರುತ್ತಾರೆ. ದ್ವಿತೀಯ ದರ್ಜೆ ಗುಮಾಸ್ತನಿಗಿಂತ ಕೆಳಗಿನ ನೌಕರರು, ಕಡಿಮೆ ಆದಾಯದ ಸಿಬ್ಬಂದಿ ಹಾಗೂ ಕ್ಷೇತ್ರ ಕಾರ್ಮಿಕರ ವರ್ಗಾವಣೆ ಜಾರಿಗೊಳಿಸುವಾಗ ಸಾಕಷ್ಟು ಕಾಳಜಿ ವಹಿಸಬೇಕೆಂದು ಮತ್ತು ಅದೇ ಕೇಂದ್ರದಲ್ಲಿ ಇರುವಂತೆ ನೋಡಿಕೊಳ್ಳಬೇಕೆಂದು ಸಲಹೆ ನೀಡಲಾಯಿತು.

ವಿಶ್ವವಿದ್ಯಾಲಯದಲ್ಲಿ ಎಸ್.ಸಿ.ಪಿ /ಎಸ್.ಟಿ.ಪಿ ಅನುದಾನದ ಬಳಕೆ ಮತ್ತು ಹಂಚಿಕೆಯ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಶಿವಪ್ಪ ಬಲ್ಲಿದವ ಮತ್ತು ಶ್ರೀ ಹನುಮೇಶ್ ನಾಯಕ ರವರು ಕೇಳಿದರು. ಇದರ ಬಗ್ಗೆ ಅಧ್ಯಯನ ಮಾಡಿ ಮುಂದಿನ ಸಭೆಯಲ್ಲಿ ಇದರ ಬಗ್ಗೆ ವರದಿಯನ್ನು ಸಲ್ಲಿಸಲು ಕೆಳಗಿನಂತೆ ಒಂದು ಸಮಿತಿಯನ್ನು ರಚಿಸಲು ಸಲಹೆ ನೀಡಲಾಯಿತು.

| | | |
|---|---|---|
| ಶ್ರೀ ಶಿವಪ್ಪ ಬಲ್ಲಿದವ | – | ಅಧ್ಯಕ್ಷರು |
| ಶ್ರೀ ಹನುಮೇಶ ನಾಯಕ | – | ಸದಸ್ಯರು |
| ಶ್ರೀ ವೆಂಕನಗೌಡ ಮಲ್ಕಪುರ | – | ಸದಸ್ಯರು |
| ಶ್ರೀ ಭೋಜನಗೌಡ | – | ಸದಸ್ಯರು |
| ಶ್ರೀ ಜಿ. ತಿಮ್ಮನಗೌಡ ಪಾಟೀಲ | – | ಸದಸ್ಯರು |

ಘಟಿಕೋತ್ಸವದಲ್ಲಿ ನೀಡುವ ಪ್ರಶಸ್ತಿಗಳ ಬಗ್ಗೆ ಚರ್ಚಿಸುತ್ತಾ ಮಾನ್ಯ ಸದಸ್ಯರಾದ ಶ್ರೀಮತಿ ಆಶಾ ಹೆಚ್.ಸಿ. ಶೇಷಾದ್ರಿರವರು ಕೇವಲ ಪದವಿ ಪ್ರಮಾಣ ಪತ್ರಗಳನ್ನು ಮತ್ತು ಅರ್ಹತಾ ಪ್ರಶಸ್ತಿಗಳನ್ನು ಮಾತ್ರ ಘಟಿಕೋತ್ಸವದ ಸಂದರ್ಭದಲ್ಲಿ ನೀಡಿ ಮತ್ತು ಉಳಿದ ಪ್ರಶಸ್ತಿಗಳನ್ನು ಸಂಸ್ಥಾಪನಾ ದಿನದ ಸಂದರ್ಭದಲ್ಲಿ ನೀಡಬೇಕೆಂದು ಸಲಹೆ ನೀಡಿದರು. ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯರವರು ಉತ್ತಮ ಶಿಕ್ಷಕರ ಪ್ರಶಸ್ತಿಯನ್ನು ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ನೀಡಬೇಕೆಂದು, ಸಂಶೋಧನಾ ಪ್ರಶಸ್ತಿಗಳನ್ನು ಸಂಸ್ಥಾಪನಾ ದಿನ ಸಂದರ್ಭದಲ್ಲಿ ನೀಡಬೇಕೆಂದು ಹಾಗೂ ಉಳಿದ ಪ್ರಶಸ್ತಿಗಳನ್ನು ಕಾರ್ಮಿಕರ ದಿನಾಚರಣೆಯಲ್ಲಿ ನೀಡಬೇಕೆಂದು ಸಲಹೆ ನೀಡಿದರು. ಮಾನ್ಯ ಸದಸ್ಯರಾದ ಶ್ರೀ ತಿಮ್ಮನಗೌಡ ಪಾಟೀಲ ರವರು ಘಟಿಕೋತ್ಸವದ ಸಂದರ್ಭದಲ್ಲಿ ಉತ್ತಮ ಮೌಲ್ಯದ ಪ್ರಶಸ್ತಿ ಮತ್ತು ಪ್ರಶಂಸೆಗಳನ್ನು ನೀಡಬೇಕೆಂದು ಸಲಹೆ ನೀಡಿದರು. ಅಧ್ಯಕ್ಷರು ಕೆಲವೇ ಪ್ರಶಸ್ತಿಗಳು ಇರುವುದರಿಂದ ಉತ್ತಮ ಪ್ರಚಾರಕ್ಕೆ ಮತ್ತು ಒಳ್ಳೆಯ ಬೆಂಬಲ ನೀಡುವುದಕ್ಕೆ ಘಟಿಕೋತ್ಸವದ ಸಂದರ್ಭದಲ್ಲಿ ಪ್ರಶಸ್ತಿಗಳನ್ನು ನೀಡಲಾಗುವುದು ಎಂದು ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆ ವ್ಯಕ್ತಪಡಿಸಿದರು. ಅಧ್ಯಕ್ಷರು ಹೊಸ ಪ್ರಶಸ್ತಿಯಾದ **'ರೈತ ವಿಜ್ಞಾನಿ'** ಪ್ರಶಸ್ತಿಯನ್ನು ಪ್ರಾರಂಭಿಸುವುದರ ಬಗ್ಗೆ ಪ್ರಸ್ತಾಪಿಸಿದರು, ಇದರ ಬಗ್ಗೆ ವಿವರವಾದ ಚರ್ಚೆಯನ್ನು ಮುಂದಿನ ಸಭೆಯಲ್ಲಿ ಕೈಗೊಳ್ಳಲಾಗುವುದೆಂದು ತಿಳಿಸಿದರು, ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟೀಲ ಮತ್ತು ಶ್ರೀ ವೆಂಕನಗೌಡ ಮಲ್ಕಪುರ ರವರು ಬೆಂಬಲ ವ್ಯಕ್ತಪಡಿಸಿದರು. ಮುಂದುವರೆದು, ಮಾನ್ಯ ಸದಸ್ಯರಾದ ಶ್ರೀ ಜಿ. ತಿಮ್ಮನಗೌಡ ಪಾಟಿಲ ರವರು ಈ ಪ್ರಶಸ್ತಿಯು ಕೇವಲ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯಾಪ್ತಿಗೆ ಮೀಸಲಿರದೆ ಇಡೀ ರಾಜ್ಯ ಮಟ್ಟದಲ್ಲಿರಬೇಕೆಂದು ಸಲಹೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿ ರವರು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ನಡೆಸಲಾಗುವ ಡಿಪ್ಲೋಮ ಪದವಿಧರರ ಭವಿಷ್ಯ, ಮುಂದಿನ ಅವಕಾಶಗಳ ಕುರಿತು ತಿಳಿಯಬಯಸಿದರು. ಇದರ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ರಾಜ್ಯ ಸರ್ಕಾರ ಮತ್ತು ಭಾರತ ಸರ್ಕಾರಕ್ಕೆ ಒಂದು ಪತ್ರವನ್ನು ಬರೆಯಲು ಸಲಹೆಯನ್ನು ನೀಡಿದರು.

ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ರವರು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಅಧಿಕಾರಿಗಳ ಪ್ರಭಾರಿ ವ್ಯವಸ್ಥೆ ಮಾಡುವಲ್ಲಿ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಸರಿಯಾಗಿ ನಿರ್ವಹಿಸದಿರುವುದರ ಬಗ್ಗೆ ಸಭೆಯಲ್ಲಿ ಪ್ರಶ್ನಿಸಿದರು. ಅದಕ್ಕೆ ಅಧ್ಯಕ್ಷರು ಅಧಿಕಾರಿಗಳ ಹುದ್ದೆಗೆ ಬೇಕಾದಂತಹ ಅವಶ್ಯಕ ವಿದ್ಯಾರ್ಹತೆಯನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿದೆ ಎಂದು ಉತ್ತರಿಸಿದರು. ನಂತರ ಡಾ. ಎಸ್.ಜಿ. ಪಾಟೀಲ ರವರನ್ನು ಶಿಕ್ಷಣ ನಿರ್ದೇಶಕರಾಗಿ ನೇಮಿಸಿರುವುದರ

ಬಗ್ಗೆ ಚರ್ಚೆ ನಡೆಸಲಾಯಿತು. ಅದಕ್ಕೆ ಅಧ್ಯಕ್ಷರು ಡಾ. ಎಸ್.ಜಿ. ಪಾಟೀಲರವರೊಬ್ಬರೆ ಈ ವಿಶ್ವವಿದ್ಯಾಲಯದಲ್ಲಿ ಆಯ್ಕೆಗೊಂಡ ಡೀನ್ ಆಗಿದ್ದು, ಆದ್ದರಿಂದ ಅವರಿಗೆ ಪ್ರಭಾರೆ ಶಿಕ್ಷಣ ನಿರ್ದೇಶಕರಾಗಿ ನೇಮಿಸಲಾಗಿದೆ ಎಂದು ತಿಳಿಸಿದರು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಮತ್ತು ಶ್ರೀ ಹನುಮೇಶ ನಾಯಕ ರವರು ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಇರಬೇಕಾದ ಮಾರ್ಗಸೂಚಿ ಮತ್ತು ಅರ್ಹತೆಗಳನ್ನು ಒದಗಿಸುವಂತೆ ಅಧ್ಯಕ್ಷರಲ್ಲಿ ಕೋರಿದರು.

ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿಯ ಇತ್ತೀಚಿನ ಸಮಸ್ಯೆಗಳ ಬೆಳವಣಿಗೆಗಳ ಬಗ್ಗೆ ಅಧ್ಯಯನ ನಡೆಸಿ, ಮಾಹಿತಿಯನ್ನು ವಿಶ್ವವಿದ್ಯಾಲಯಕ್ಕೆ ನೀಡುವ ಸಲುವಾಗಿ ಕೆಳಕಂಡಂತೆ ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು :

| | | |
|---|---|---|
| ಶ್ರೀ ಎಂ.ವಿ. ಗುತ್ತೇದಾರ | – | ಅಧ್ಯಕ್ಷರು |
| ಶ್ರೀ ಎಂ.ಎಸ್. ಸೋಮಲಿಂಗಪ್ಪ | – | ಸದಸ್ಯರು |
| ಶ್ರೀ ಅಲ್ಲಂಪ್ರಭು ಪಾಟೀಲ | – | ಸದಸ್ಯರು |
| ಶ್ರೀ ಜಿ. ತಿಮ್ಮನಗೌಡ ಪಾಟೀಲ | – | ಸದಸ್ಯರು |
| ಶ್ರೀ ಬಸವರಾಜ ಪಾಟೀಲ ಇಟಗಿ | – | ಸದಸ್ಯರು |
| ಶ್ರೀ ಹನುಮೇಶ ನಾಯಕ | – | ಸದಸ್ಯರು. |

**ಠರಾವು:**

ವಿಸ್ತೃತವಾದ ಚರ್ಚೆಯ ನಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ತೃತೀಯ ಮತ್ತು ನಾಲ್ಕನೇಯ ಸಭೆಯ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಿ ಕೈಕೊಂಡ ಕ್ರಮಗಳಿಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| ಅನುಕ್ರಮ ಸಂ: 2 | ರಾಯಚೂರು ಜಿಲ್ಲಾ ಆಡಳಿತ ಭವನ ನಿರ್ಮಾಣಕ್ಕೆ ಭೂಮಿ ನೀಡುವ ಕುರಿತು |
|---|---|

**ಠರಾವು:**

ಸುದೀರ್ಘ ಚರ್ಚೆಯ ನಂತರ, ಹೊಸ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಈಗಿರುವ ಭೂಮಿಯು ಕಡಿಮೆ ಇದ್ದು, ಹಲವು ಅಭಿವೃದ್ಧಿ ಕಾರ್ಯಗಳು, ಚಟುವಟಿಕೆಗಳು ಕೈಗೊಳ್ಳಬೇಕಾಗಿರುವುದರಿಂದ, ರಾಯಚೂರು ಜಿಲ್ಲಾಡಳಿತ ಭವನ ನಿರ್ಮಾಣಕ್ಕೆ ಭೂಮಿ ನೀಡಬಾರದೆಂದು ತೀರ್ಮಾನಿಸಲಾಯಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 3 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿನಿಯಮಗಳನ್ನು ಅಂತಿಮಗೊಳಿಸುವುದರ ಬಗ್ಗೆ |
|---|---|

ಠರಾವು

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಪರಿನಿಯಮಗಳನ್ನು ಸದಸ್ಯರುಗಳ ಮಾಹಿತಿಗಾಗಿ ಹಾಗೂ ಚರ್ಚೆಗೆ ಕನ್ನಡದಲ್ಲಿ ನೀಡಬೇಕೆಂದು ಮಾನ್ಯ ಸದಸ್ಯರಾದ ಶ್ರೀ ವೆಂಕನಗೌಡ ಮಲ್ಕಾಪುರ ರವರು ಚರ್ಚೆಯಲ್ಲಿ ಸಲಹೆ ನೀಡಿದರು. ಕೆಲವು ಒಳ್ಳೆಯ ವಿಷಯಗಳು ಹಳೆಯ ಪರಿನಿಯಮಗಳಲ್ಲಿ ಇದ್ದರೂ ಸಹ ಹೊಸ ನಿಯಮಗಳ ಪ್ರಕಾರ ಅವುಗಳನ್ನು ಸೇರಿಸುವುದಕ್ಕೆ ಬರುವುದಿಲ್ಲವೆಂದು, ಹೊಸ ಅಧಿನಿಯಮದ ಪ್ರಕಾರ ಪರಿನಿಯಮಗಳನ್ನು ಅಂತಿಮಗೊಳಿಸಬೇಕಾಗಿದೆ ಎಂದು ಮಾನ್ಯ ಸದಸ್ಯರಾದ ಶ್ರೀ ಗುತ್ತೇದಾರ ಮತ್ತು ಅಧ್ಯಕ್ಷರು ತಿಳಿಸಿದರು. ಇತರ ಸದಸ್ಯರು ಇದನ್ನು ಅಂತಿಮಗೊಳಿಸುವವರೆಗೆ ಕಾಯ್ದು, ನಂತರ ಚರ್ಚೆಯನ್ನು ಮುಂದಿನ ಸಭೆಯಲ್ಲಿ ಕೈಗೊಂಡು ಅಂತಿಮಗೊಳಿಸಲು ನಿರ್ಧರಿಸಲಾಯಿತು.

| ಅನುಕ್ರಮ ಸಂ: 4 | ಸಿಎಎಸ್ –96 ನಿಯಮದಡಿ ಶಿಕ್ಷಕರಿಗೆ ಬಡ್ತಿ ನೀಡುವುದರ ಬಗ್ಗೆ |
|---|---|

ಮಾನ್ಯ ಕುಲಪತಿಗಳು ಮತ್ತು ಅಧ್ಯಕ್ಷರು ಸಭೆಗೆ ಸಿ.ಎ.ಎಸ್ –96 ರ ಶಿಕ್ಷಕರ ಬಡ್ತಿ ಯೋಜನೆಯ ಬಗ್ಗೆ ವಿವರಿಸಿದ ಮೇಲೆ ಸದರಿ ವಿಷಯದ ಬಗ್ಗೆ ಚರ್ಚೆ ನಡೆಯಿತು. ಮಾನ್ಯ ಸದಸ್ಯರಾದ ಡಾ. ಚೆಲ್ಲಯ್ಯರವರು ಸದರಿ ವಿಷಯದ ಮೇಲೆ ಮಂಡಳಿಯ ಪೂರ್ವಾನುಮೋದನೆ ಪಡೆಯದೇ ಇರುವುದರ ಬಗ್ಗೆ ಪ್ರಸ್ತಾಪ ಮಾಡಿದರು. ಅಧ್ಯಕ್ಷರು ಸಿ.ಎ.ಎಸ್ –96 ಯೋಜನೆ ಜಾರಿಗೊಳಿಸುವುದು ಒಂದು ನಿತ್ಯದ ಪ್ರಕ್ರಿಯೆಯಾಗಿದ್ದು, ಆದಾಗ್ಯೂ ಮಂಡಳಿಯ ಮೊದಲ ಸಭೆಯಲ್ಲಿ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಪರಿನಿಯಮಗಳು ಮತ್ತು ನಿಯಮಾವಳಿಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿನಿಯಮಗಳು ಮತ್ತು ನಿಯಮಾವಳಿಗಳನ್ನು ರಚಿಸುವವರೆಗೆ ಅಳವಡಿಸಿಕೊಳ್ಳಲು ಅನುಮೋದನೆ ಪಡೆಯಲಾಗಿದೆ ಎಂದು ಉತ್ತರಿಸಿದರು.

ಮಾನ್ಯ ಸದಸ್ಯರಾದ ಶ್ರೀ ಹನುಮೇಶ ನಾಯಕರವರು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಯೋಜನೆಗಳನ್ನು ಕೇವಲ ಆಯ್ದ ಶಿಕ್ಷಕರು / ವಿಜ್ಞಾನಿಗಳಿಗೆ ನೀಡಲಾಗುತ್ತಿದೆ ಎಂದು ಹೇಳಿದರು. ಆದರೆ ಇದನ್ನು ಆದ್ಯಕ್ಷರು ಒಪ್ಪದೇ ವಿಜ್ಞಾನಿಗಳ ಪರಿಣಿತೆ, ಸಾಮರ್ಥ್ಯ ಮತ್ತು ಈ ಭಾಗದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ನೀಡಲಾಗಿದೆ. ಯೋಜನೆ ನೀಡಲಾಗದ ಸಿಬ್ಬಂದಿಯ ಹೆಸರನ್ನು ಸೂಚಿಸುವಂತೆ ಮಾನ್ಯ ಸದಸ್ಯರಲ್ಲಿ ಕೇಳಿಕೊಂಡರು. ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಸೋಮಲಿಂಗಪ್ಪರವರು ಇದಕ್ಕೆ ಸಮ್ಮತಿಸಿದರು. ಮಾನ್ಯ ಸದಸ್ಯರಾದ ಶ್ರೀ ಹನುಮೇಶ ನಾಯಕ ಮತ್ತು ಶ್ರೀ ಜಿ. ತಿಮ್ಮನಗೌಡ ಪಾಟೀಲ ಅವರು ಅಧ್ಯಕ್ಷರಲ್ಲಿ ಸಂಶೋಧನಾ ಯೋಜನೆಗಳ ವಿವರಗಳನ್ನು ನೀಡಲು ವಿನಂತಿಸಿದರು.

ತದನಂತರ, ಸಿ.ಎ.ಎಸ್. –96 ಮುಂಬಡ್ತಿ ಯೋಜನೆಯ ಚರ್ಚೆಯಲ್ಲಿ ಮಾನ್ಯ ಸದಸ್ಯರಾದ ಡಾ. ಚೆಲ್ಲಯ್ಯ, ಶ್ರೀ ಹನುಮೇಶ್ ನಾಯಕ ಮತ್ತು ಶ್ರೀ ವೆಂಕನಗೌಡ ಮಲ್ಕಾಪುರ ಅಸಮಾಧಾನ ವ್ಯಕ್ತಪಡಿಸುತ್ತಾ ಇನ್ನು ಮೇಲೆ ಮಂಡಳಿಯ ಉಪ ಸಮಿತಿಗಳನ್ನು ರಚಿಸಬೇಕೆಂದು ಹೇಳಿದರು. ಆದರೆ ಬಹುತೇಕ ಮಾನ್ಯ ಸದಸ್ಯರುಗಳಾದ, ಶ್ರೀ ಎಂ.ಎಸ್. ಸೋಮಲಿಂಗಪ್ಪ, ಶ್ರೀ ಶಂಕರಗೌಡ ಹರವಿ, ಶ್ರೀ ತಿಮ್ಮನಗೌಡ ಪಾಟೀಲ, ಶ್ರೀಮತಿ ಆಶಾ ಹೆಚ್.ಸಿ. ಶೇಷಾದ್ರಿ, ಶ್ರೀ ಭೋಜನಗೌಡ ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿ ಸದಸ್ಯರುಗಳು ಅರ್ಹ ಶಿಕ್ಷಕರಿಗೆ ಬಡ್ತಿ ನೀಡುವ ಸಲುವಾಗಿ ಸಿ.ಎ.ಎಸ್. –96 ಯೋಜನೆಯ ಜಾರಿಗೊಳಿಸುವ ಅವಶ್ಯಕತೆಯನ್ನು ಪರಿಗಣಿಸಿ ಈ ಯೋಜನೆಯ ಬಡ್ತಿಗೆ ಅರ್ಹರಿರುವ ಶಿಕ್ಷಕರುಗಳ ಯಾದಿಗೆ ಅನುಮೋದನೆಯನ್ನು ನೀಡಲು ಶಿಫಾರಸ್ಸು ಮಾಡಿದರು.

ಠರಾವು

ಸುದೀರ್ಘ ಚರ್ಚೆಯ ನಂತರ, ಈ ಯೋಜನೆಯ ಜಾರಿಗೊಳಿಸುವ ಅವಶ್ಯಕತೆ ಮತ್ತು ಶೀಘ್ರತೆಯನ್ನು ಪರಿಗಣಿಸಿ ಮಂಡಳಿಯು ಸಿ.ಎ.ಎಸ್. 96 ಯೋಜನೆಯ ಅಡಿಯಲ್ಲಿ ಮುಂಬಡ್ತಿಯನ್ನು ಪಡೆಯಲು ಅರ್ಹರಿರುವ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸಿತು.

(ಕ್ರಮ : ಕುಲಸಚಿವರು)

---

| ಅನುಕ್ರಮ ಸಂ: 5 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸುವುದು. |
|---|---|

---

ಮಾನ್ಯ ಕುಲಪತಿಗಳು ಮತ್ತು ಅಧ್ಯಕ್ಷರು ಶಿಕ್ಷಕರ ನೇಮಕಾತಿಯಲ್ಲಿ ಜರುಗಿದ ಪ್ರಕ್ರಿಯೆಗಳನ್ನು ವಿವರಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಆಶಾ ಹೆಚ್.ಸಿ. ಶೇಷಾದ್ರಿರವರು ಸಸ್ಯ / ಕೃಷಿ ಬಯೋಟೆಕ್ನಾಲಜಿಯ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅನುವಂಶೀಯ ಮತ್ತು ಸಸ್ಯ ತಳಿ ವೃದ್ಧಿ ಶಾಸ್ತ್ರ (GPB) ಅಭ್ಯರ್ಥಿಗಳನ್ನು ಪರಿಗಣಿಸದಿರುವುದರ ಬಗ್ಗೆ ದೂರಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಸಸ್ಯ / ಕೃಷಿ ಬಯೋಟೆಕ್ನಾಲಜಿಯಲ್ಲಿ ಪದವಿಗಳು ಇತ್ತೀಚೆಗೆ ಪ್ರಾರಂಭಗೊಂಡಿರುವುದರಿಂದ ಮೊದಲು ಸಸ್ಯ ತಳಿ ವೃದ್ಧಿ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ ಸಸ್ಯ / ಕೃಷಿ ಬಯೋಟೆಕ್ನಾಲಜಿಯ ವಿಷಯಗಳಲ್ಲಿ ಸಂಶೋಧನೆ ಮಾಡಿ ಪಿ.ಹೆಚ್.ಡಿ ಪದವಿಯನ್ನು ಪಡೆದವರನ್ನು ಮಾತ್ರ ಪರಿಗಣಿಸಲಾಗಿದೆ ಎಂದು ತಿಳಿಸಿದರು. ಈ ವಿದ್ಯಾರ್ಹತೆಗಳ ಅವಶ್ಯಕತೆಗನುಗುಣವಾಗಿ ಅರ್ಜಿಯನ್ನು ಪಡೆಯುವ ಕೊನೆಯ ದಿನಾಂಕಕ್ಕೆ ಮುಂಚೆಯೇ ದಿನಪತ್ರಿಕೆಗಳಲ್ಲಿ ಜಾಹೀರಾತಿನ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ ಎಂದು ಹೇಳಿದರು.

ಅಧ್ಯಕ್ಷರು ಹಿಂಬಾಕಿ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳ ಮೆರಿಟ್ ಆಧಾರದ ಮೇಲೆ ಕೌನ್ಸಲಿಂಗ್ ಮಾಡಲಾಗಿದೆ ಎಂದು ತಿಳಿಸಿದರು. ನೇಮಕಾತಿಯಲ್ಲಿ ಬಳಸಿದ ರೋಸ್ಟರ್ ಪದ್ಧತಿಯ ಬಗ್ಗೆ ಲಘು ಚರ್ಚೆ ನಡೆಯಿತು. ಅಧ್ಯಕ್ಷರು ಕರ್ನಾಟಕ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ರೋಸ್ಟರ್ ಪದ್ಧತಿಯ ಬಗ್ಗೆ ವಿವರಿಸುತ್ತಾ ಅದನ್ನು ಸದರಿ ನೇಮಕಾತಿಯಲ್ಲಿ ಪಾಲಿಸಲಾಗಿದೆ ಎಂದು ತಿಳಿಸಿದರು. ಹೊಸದಾಗಿ ನೇಮಕಗೊಂಡವರಿಗೆ ಕೆಲಸಕ್ಕೆ ಹಾಜರಾಗಲು ನೀಡಬೇಕಾಗಿರುವ ಕಾಲಾವಧಿಯ ಬಗ್ಗೆ ಚರ್ಚೆ ನಡೆಯಿತು. ಈ ವಿಷಯದಲ್ಲಿ ಇತರೇ ವಿಶ್ವವಿದ್ಯಾಲಯಗಳಲ್ಲಿ / ಕರ್ನಾಟಕ ನಾಗರಿಕ ಸೇವಾ ನಿಯಮವಳಿಗಳನ್ನು ಅನುಸರಿಸುವಂತೆ ನಿರ್ಧರಿಸಲಾಯಿತು. ಮಂಡಳಿಯು ಅರ್ಹ ಅಭ್ಯರ್ಥಿಗಳ ಮೀಸಲು ಪಟ್ಟಿಯ ವ್ಯಾಲಿಡಿಟಿ ಅವಧಿಯನ್ನು ಆರು ತಿಂಗಳವರೆಗೆ ಇರಿಸುವಂತೆ, ನೇಮಕಾತಿ ಆದೇಶಗಳನ್ನು ಅರ್ಹತೆಯ ಆಧಾರದ ಮೇಲೆ ನೀಡುವಂತೆ ಅನುಮೋದಿಸಿತು. ಜಾತಿ ಪರಿಶೀಲನೆಗೆ ಆಯ್ಕೆಗೊಂಡ ಎಲ್ಲ ಸೇವಾ ಸಿಬ್ಬಂದಿಗಳ ಸಂಪೂರ್ಣ ಪಟ್ಟಿಯನ್ನು ನೀಡುವಂತೆ ಮಾನ್ಯ ಸದಸ್ಯರಾದ ಶ್ರೀ ಹನುಮೇಶ ನಾಯಕ ಕೇಳಿಕೊಂಡರು. ಆದರೆ ಸೂಚನಾ ಫಲಕದ ಮೇಲೆ ಹಚ್ಚುವವರೆಗೆ / ಜಾತಿ ಪರಿಶೀಲನಾ ಕಾರ್ಯವು ಆಗುವವರೆಗೆ ನಿಯಮಾವಳಿಗಳ ಪ್ರಕಾರ ಅದದನ್ನು ನೀಡಲು ಬರುವುದಿಲ್ಲವೆಂದು ಅಧ್ಯಕ್ಷರು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಚೆಲ್ಲಯ್ಯರವರು ಮಂಡಳಿಯ ಅನುಮೋದನೆಗಿಂತ ಮುಂಚೆ ನೇಮಕಾತಿ ಜಾಹಿರಾತನ್ನು ನೀಡದಿರುವುದರ ಬಗ್ಗೆ ಮತ್ತೊಮ್ಮೆ ವಿಷಯವನ್ನು ಪ್ರಸ್ತಾಪಿಸಿದರು. ಅದಕ್ಕೆ ಅಧ್ಯಕ್ಷರು ಈ ವಿಷಯವನ್ನು ಮಂಡಳಿಯ ಎರಡನೇಯ ಮತ್ತು ಮೂರನೇಯ ಸಭೆಯಲ್ಲಿ ಈಗಾಗಲೇ ವಿವರವಾಗಿ ಚರ್ಚಿಸಲಾಗಿದೆ ಎಂದು ತಿಳಿಸಿ ಇನ್ನೂ ಮುಂದೆ ಇಂತಹ ವಿಷಯಗಳನ್ನು ಮಂಡಳಿಯ ಅವಗಾಹನೆಗೆ ತರಲಾಗುವುದೆಂದು ಉತ್ತರಿಸಿದರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀಮತಿ ಆಶಾ ಶೇಷಾದ್ರಿ, ಶ್ರೀ ಜಿ ತಿಮ್ಮನಗೌಡ, ಶ್ರೀ ಶಂಕರಗೌಡ ಹರವಿ ಹಾಗೂ ಉಳಿದ ಎಲ್ಲಾ ಮಾನ್ಯ ಸದಸ್ಯರು ಬೆಂಬಲಿಸಿದರು. ಇದಾದ ಮೇಲೆ ಶಿಕ್ಷಕರ ನೇಮಕಾತಿ ಕುರಿತಾಗಿ ಅಧ್ಯಕ್ಷರು ವಿಷಯವಾರು ಆಯ್ಕೆಗೊಂಡ ಶಿಕ್ಷಕರ ಹೆಸರುಗಳನ್ನು ಓದಿ ಹೇಳಿದರು. ಇದಕ್ಕೆ

ಸರ್ವಾನುಮತದಿಂದ ಅನುಮೋದನೆ ದೊರೆಯಿತು. ನೇಮಕಗೊಂಡ ಮತ್ತು ಕಾಯ್ದಿರಿಸಿದ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮಾಹಿತಿ ಮತ್ತು ಸಂದರ್ಶನಕ್ಕೆ ಕರೆಯಲಾದ ಎಲ್ಲಾ ಅಭ್ಯರ್ಥಿಗಳ ವೈಯಕ್ತಿಕ ವಿವರಗಳನ್ನು ಹಾಜರಿದ್ದ ಎಲ್ಲಾ ಸದಸ್ಯರಿಗೆ ನೀಡಲಾಯಿತು. ಅವಶ್ಯಕವೆನಿಸಿದ್ದಲ್ಲಿ ಅಭ್ಯರ್ಥಿಗಳ ಸಂದರ್ಶನದ ಅಂಕಗಳನ್ನೂ ಸಹ ಓದಲಾಯಿತು.

**ಠರಾವು**

ಸದರಿ ಕಲಮುವಾರು ಚರ್ಚಿಸಿ, ಮಂಡಳಿಯು ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆ ನೀಡಿ ನಿಮಾವಳಿಗಳ ಪ್ರಕಾರ ಮತ್ತು ಅವಶ್ಯಕ ಆದೇಶಗಳನ್ನು ನೀಡಲು ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು)

| | |
|---|---|
| **ಹೆಚ್ಚುವರಿ ಕಲಮು** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖಾಲಿ ಇರುವ ಸೇವಾ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ** |

**ಠರಾವು**

ಮಂಡಳಿಯು ಕಲಮು ಪರಿಶೀಲಿಸಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಖಾಲಿ ಇರುವ ಸೇವಾ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದಿಸಿತು.

(ಕ್ರಮ: ಕುಲಸಚಿವರು)

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /- 24-5-2011 | ಸಹಿ /- 24-5-2011 |
| **(ಬಿ.ವಿ ಪಾಟೀಲ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಪಿ. ಬಾಲಕೃಷ್ಣನ್)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಪಿ. ಬಾಲಕೃಷ್ಣನ್)**
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

5

## PROCEEDINGS OF FIFTH MEETING OF THE BOARD OF MANAGEMENT OF UAS RAICHUR HELD IN DR. COLEMAN'S CONFERENCE HALL IN THE COMMISSIONERATE OF AGRICULTURE AT BANGALORE ON 12-5-2011

**Members Present:**

| | | |
|---|---|---|
| 1. | Dr. B.V. Patil | Chairman |
| 2. | Sri. M.V. Guttedar | Member |
| 3. | Sri. M.S. Somalingappa | Member |
| 4. | Sri. Bhojanagouda | Member |
| 5. | Sri. Shankaragouda Haravi | Member |
| 6. | Sri. Venkanagouda Malkapur | Member |
| 7. | Sri. Shivappa B. Ballidav | Member |
| 8. | Sri. Hanumesha Nayak | Member |
| 9. | Dr. Challaiah | Member |
| 10. | Smt. H.C. Asha Sheshadri | Member |
| 11. | Sri. G. Thimmanagouda Patil | Member |
| 12. | Dr. S.G. Patil | Member |
| 13. | Dr. P. Balakrishnan | Member-Secretary |

At the outset, Hon'ble Vice-Chancellor and Chairman welcomed all the Members for the Fifth Meeting of the Board of Management. The following items were taken up for discussion and resolved as follows.

**ITEM NO. 1 CONFIRMATION OF PROCEEDINGS OF THE THIRD AND FOURTH MEETINGS OF THE HON'BLE BOARD OF MANAGEMENT OF UAS RAICHUR HELD ON 26-3-2011 AND 15-4-2011 RESPECTIVELY AND THE ACTION TAKEN THEREON.**

Hon'ble Member Sri. Venkanagouda Malkapur informed that some of the points he raised during the Third Meeting of the Board of Management have not found place in the proceedings of the meeting specifically indicating his name, for which Dr. P. Balakrishnan, Registrar replied that such points, if indicated could be included in the proceedings. Hon'ble Members Smt. Asha Sheshadri and Dr. Challaiah opined that the point or issue of discussion or suggestion only needs to be specified rather than the names of the Members in the proceedings. Similar opinion was expressed by most of the Members, while Hon'ble Members Sri. Venkanagouda Malkapur and Sri. Hanumesha Nayak stressed to include the names of the Members too. Following this, Hon'ble Members Sri. Hanumesha Nayak and Sri. Shivappa Ballidav sought information

from the Chairman whether he had written to the Government for removing them from the Board, for that the Chairman clarified that he had not done anything of that sort, which is beyond his powers. Hon'ble Member Sri. M.S. Somalingappa informed the above Members to produce if they have any such letters, to the house in the next meeting and suggested to avoid such discussions in future, which was supported by Hon'ble Member Sri. Shankaragouda Haravi.

Hon'ble Member Sri. Shivappa Ballidav informed the house about the poor quality of cement mortar that he had observed in the construction of compost pit near the dairy shed of MARS, Raichur during his inspection and the same was supported by Hon'ble Member Sri. Bojanagouda. He also mentioned about building leakage at ARS, Raddewadgi, for which Hon'ble Member Sri. Thimmanagouda Patil suggested for setting up an enquiry committee to study the same. The Chairman informed the house that the abovesaid building was constructed during the UAS Dharwad period.

Hon'ble Member Sri. Bojanagouda informed the house that even few months after the complaint about the functioning of dairy shed in ARS, Gangavati, the conditions there have not improved, which was supported by Hon'ble Member Dr. Challaiah. The Chairman replied that things have improved considerably since then and if Hon'ble Members were not satisfied, they could visit and ascertain themselves the same. In addition, he informed the house that necessary and corrective administrative action had been taken consequent to the report submitted by the Committee formed in this regard.

There was a discussion on transfer of staff and Hon'ble Members Sri. Hanumesha Nayak and Sri. Shivappa Ballidav felt that their advice in this regard was not considered, for which Hon'ble Members Sri. M.S. Somalingappa, Sri. Shankaragouda Haravi, Smt. Asha Sheshadri and Sri. G. Thimmanagouda Patil informed the house that the Members have limited powers for intervening in the affairs and the day-to-day administration of the University. The Chairman also informed that the transfers are made on request basis, on the grounds of misbehaviour, indiscipline, misappropriation of funds and local complaints as well as in the interests of the University.

Sri. Hanumesha Nayak raised the issue of the transfer of Sri. Venkatram, Heavy Vehicle Driver from ARS, Gangavati, for which the Vice-Chancellor replied that he was transferred as the University had received serious complaints on him for a long time, while Sri. Nagaraj, Lab Assistant was transferred based on the Committee's report. Sri.

Bojanagouda suggested the transfer of those staff who are troublesome and non-performing and replace them with good persons to improve the efficiency in the farms.

There was elaborate discussion on the transfer policy of the University by Hon'ble Members Sri. M.S. Somalingappa, Sri. Venkanagouda Malkapur, Sri. Bojanagouda, Sri. Hanumesha Nayak and others. It was resolved that the staff who have put on 5-years of service at a particular station could be transferred. However, this policy of transfer cannot be adopted uniformly for all the personnel, as some Scientists/persons are involved in specific mandate of research and specialised activities being carried out in respective Stations. Also, it was suggested that while effecting the transfer, due consideration might be given for the employees equal to or below the cadre of Second Division Clerk like low income group staff and farm labourers, to retain them in the same stations.

Hon'ble Members Sri. Shivappa Ballidav and Sri. Hanumesha Nayak wanted to know about the allocation and utilisation of SCP / STP grants in the University, for which it was suggested to form a following Committee to study in detail the same and submit the report in the next Board meeting:

| | | |
|---|---|---|
| Sri. Shivappa Ballidav | - | Chairman |
| Sri. Hanumesha Nayak | - | Member |
| Sri. Venkanagouda Malkapur | - | Member |
| Sri. Bojanagouda | - | Member |
| Sri. G. Thimmanagouda Patil | - | Member. |

Regarding the issue of presentation of awards in the convocation, Hon'ble Member Smt. Asha Sheshadri suggested for awarding only the certificates of degrees and merit awards during the convocation and the other awards could be presented during the Foundation Day celebrations. Hon'ble Member Dr. Challaiah suggested to award the Best Teacher Award during the Teachers' Day celebrations, Research awards during the Foundation Day celebrations and other awards during the Karmigars' Day function. Hon'ble Member Sri. G. Thimmangouda Patil suggested to present the awards of higher value and better appreciation in the convocation, The Chairman suggested that since the awards are few, they could be given during the convocation, as it would generate good encouragement and wide publicity, to which all the Members agreed. During the course of discussion, the Chairman suggested for instituting new awards of '*Raith Vignani*', which could be taken up in the next meeting for detailed discussion.

This was supported by Hon'ble Members Sri. G. Thimmangouda Patil and Sri. Venkanagouda Malkapur. Hon'ble Member Sri. G. Thimmangouda Patil suggested not to limit these awards to only the jurisdiction of the UAS Raichur, but to be extended to consider the entire state.

Hon'ble Member Sri. Shankaragouda Haravi wished to know about the avenues for the diploma holders coming out of the proposed courses in the UAS Raichur in furthering their careers through general degree courses etc. and also suggested the University to write a letter in this regard to the HRD Ministry of the Government of India and the State Government.

Hon'ble Member Dr. Challaiah raised a query on not maintaining the seniority of teachers in making in-charge arrangements of Officers in the UAS Raichur. The Chairman replied that the seniority of teachers has always been maintained while making the in-charge arrangements of Officers by considering the essential qualifications required for the posts of Officers. Further, about the discussion of making Dr. S.G. Patil as the Director of Education, the Chairman clarified that he was the only selected Dean working in this University and as such he has been made in-charge Director of Education. Hon'ble Members Dr. Challaiah and Sri. Hanumesha Nayak in this regard requested the Chairman to provide the guidelines and qualification requirements of the Officers in the University.

Regarding the recent problems that have happened in the Agricultural College, Bheemarayanagudi, it was resolved to form a Committee as follows to study and submit the report to the University:

| | | |
|---|---|---|
| Sri. M.V. Guttedar | - | Chairman |
| Sri. M.S. Somalingappa | - | Member |
| Sri. Allamprabhu Patil | - | Member |
| Sri. G. Thimmanagouda Patil | - | Member |
| Sri. Basavaraj Patil Itagi | - | Member |
| Sri. Hanumesha Nayak | - | Member. |

Resolution :

After detailed discussion, the Proceedings of the Third and Fourth Meetings of the Board of Management were taken as read and confirmed and the actions taken were approved by the Board.

## ITEM NO. 2 ALLOTMENT OF LAND FOR DISTRICT ADMINISTRATIVE BUILDING, RAICHUR

Resolution :

After thorough discussion of the item, it was resolved not to allot any land for construction of Raichur District Administrative Building, as the land area of the UAS Raichur is very less and is required for various activities and developmental works of the new University.

(Action: Registrar)

## ITEM NO. 3 FINALIZATION OF STATUTES OF THE UAS RAICHUR

Resolution :

During the discussion on the item, it was suggested by Hon'ble Member Sri. Venkanagouda Malkapur to provide the old statutes of the UAS Dharwad in Kannada for information of the Members to take up discussion. Hon'ble Member Sri. Guttedar and the Chairman informed that even if some good things are there in the old statutes, the same cannot be included and the things have to be finalised as per the new act only. It was decided to wait till the others finalise the statutes and then the discussion could be taken up in the next meeting for finalising the same.

## ITEM NO. 4 PROMOTION OF TEACHERS UNDER CAS 96 SCHEME

The Chairman explained about the Scheme of CAS 96 for promotion of Teachers to the house, following which there was discussion on the same. Hon'ble Member Dr. Challaiah raised the issue of not taking prior approval of the Board on this. The Chairman replied that implementing the CAS 96 Scheme was a routine activity of the University and also the approval of the Board was taken in the First Meeting of the Board itself for adoption of the statutes, regulations etc. of the UAS Dharwad by the UAS Raichur till the new ones are formulated. Hon'ble Member Sri. Hanumesha Nayak mentioned that the research projects in the University were given only to a few selected Scientists/Teachers. This was not agreed upon by the Chairman and he informed the house that these projects were awarded only on the basis of the problems of region and

the expertise of the personnel, who were capable of tackling the research problems concerned. He asked the Hon'ble Member to inform the name of the staff for whom the research project was not allotted. Hon'ble Member Sri. M.S. Somalingappa also opined that these projects might have been awarded to the Scientists based on the experience and specialisation requirements for undertaking them. Hon'ble Members Sri. G. Thimmanagouda Patil and Sri. Hanumesha Nayak requested the Chairman to provide the details of the research projects.

Later, in course of discussion on approval of CAS 96 results for promotion of Teachers, Hon'ble Members Dr. Challaiah, Sri. Hanumesha Nayak and Sri Venkanagouda Malkapur expressed their dissent note stating that when the old regulations under the old statutes were followed for CAS 96 Scheme, similarly, adopting the old statutes of the UAS Dharwad, various Sub-committees of the Board should be constituted forthwith. However, considering the necessity of implementing the CAS 96 Scheme for giving promotion to the eligible Teachers, majority of the Members Sri M.S. Somalingappa, Sri Shankaragouda Haravi, Sri Thimmanagouda Patil, Smt. Asha Sheshadri, Sri Bojanagouda and all Official Members present in the meeting recommended for approval of the list of eligible candidates for promotion.

Resolutuion:

After thorough discussion, considering the urgency and necessity of the issue of promotion of Teachers, the Board approved the list of eligible candidates for promotion under the CAS 96 Scheme.

(Action: Registrar)

---

**ITEM NO. 5 APPROVAL OF APPOINTMENT OF TEACHERS IN UAS RAICHUR**

---

The Vice-Chancellor and the Chairman explained the procedures followed in the appointment of Teachers. During the discussion of the item that followed, Hon'ble Member Smt. Asha Sheshadri informed that there was some complaint regarding consideration of Genetics and Plant Breeding (GPB) candidates also for the posts of Assistant Professor in Plant/Agri-Biotechnology, for which the Chairman replied that the specialised degrees of Plant/Agri-Biotechnology were started recently and therefore, the candidates who have completed Master's degree earlier in GPB, but have carried out

research related to Plant/Agri-Biotechnology topics in their Ph.D. degree were considered. These qualification requirements were clearly indicated in the corrigendum advertisement in newspapers before the last date for receipt of applications.

The Chairman informed that regarding the appointment of posts under the Backlog Category only counselling is done based on the merit of the eligible candidates. The roster system followed in the appointment also came up for brief discussion. The Chairman explained about the roster system that is in place in the state of Karnataka, and informed that the same was strictly followed while making the recruitments during the current year. There was discussion on the time to be given for joining posts by the new recruits. It was decided to adopt the regular procedures being followed in this regard in other universities/as per the KCS Rules. The Board also approved a validity period of six months for keeping the reserve list of all the candidates and in the order of merit, the posting orders can be issued. Regarding the request of Hon'ble Member Sri. Hanumesha Nayak to provide the complete list of the selected candidates of service personnel before verification of caste, the Chairman replied that as per the procedure the list of candidates selected under categories of caste cannot be provided prior to the confirmation of caste of the candidates or displayed in the notice board.

Hon'ble Member Dr. Challaiah raised once again the issue of advertisement on recruitment of Teachers before the approval of the Board. The Chairman replied that it was discussed in detail in the Second and Third Meetings of the Board and in future such things would be done with prior approval/information of the Board, which was also supported by Hon'ble Members Smt. Asha Sheshadri, Sri. G. Thimmanagouda Patil, Sri. Shankaragouda Haravi and others. Following this, regarding the appointment of Teachers, the Chairman read subject-wise list of selected candidates, which was approved unanimously by the Board. The information on list of selected candidates and wait-listed candidates for various posts of Teachers and the bio-data of the all the candidates who were called for the interview were given to all the Members present and wherever required, the interview marks of the candidates were also read out.

Resolution :

After discussion of the item, the Board approved the list of selected candidates for appointment of Teachers in the University and issuing of necessary orders as per the procedures.

(Action: Registrar)

**ADDITIONAL ITEM : FILLING UP OF VACANT POSITIONS OF SERVICE PERSONNEL IN DIFFERENT KVKs OF UAS RAICHUR**

Resolution:

The Board went through the item and approved filling up of vacant posts of service personnel in different KVKs of the University.

(Action: Registrar)

The meeting ended with vote of thanks by the Registrar and Member-Secretary of the Board.

| Sd/- 18-5-2011 | Sd/- 18-5-2011 |
|---|---|
| B.V. PATIL<br>Vice-Chancellor & Chairman<br>UAS Raichur | P. BALAKRISHNAN<br>Registrar & Member-Secretary<br>UAS Raichur |

P. BALAKRISHNAN
Registrar & Member-Secretary
UAS Raichur

Approved
19/5
VC

(5)